ಅಪಾಯಿಂಟ್ ಮಾಡಿದರು. ಇದನ್ನು ಏಕೆ ನೀವು ಸ್ಟಾಪ್ ಮಾಡಿದಿರಿ? ಈಗ ನಮ್ಮ ಕ್ಷೇತ್ರದಲ್ಲಿ ಏಳು ಜನ ಡಾಕ್ಟರ್‌ಗಳು ಇಲ್ಲ. ಒಬೊಬ್ಬ ಡಾಕ್ಟರ್‌ನ್ನು ಮೂರು ಮೂರು ಕಡೆ ಹಾಕಿದರೆ ಅವರು ಎಲ್ಲೂ ಕೆಲಸ ಮಾಡುವ ಹಾಗಿಲ್ಲ. ಡಾಕ್ಟರ್‌ಗಳು ಎಂದರೆ, ಖಾಯಿಲೆ ಬಂದರೆ ನೋಡುವುದಕ್ಕೆ ಅವರ ಅವಶ್ಯಕತೆ ಎಷ್ಟು ಇದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಮನಗಾಣಬೇಕು. ಈಗ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ವೈದ್ಯರನ್ನು ತೆಗೆದುಕೊಳ್ಳುವುದನ್ನು ಸ್ಥಗಿತಗೊಳಿಸಿದ್ದೀರಿ. ಮತ್ತೆ ಪಿ.ಹೆಚ್.ಸಿ.ಯಿಂದ ಆಗಲಿ, ತುರ್ತಾಗಿ ಯಾವಾಗ ವೈದ್ಯರನ್ನು ನೇಮಕಾತಿ ಮಾಡುತ್ತೀರೆಂದು, ಈ ಸಭೆಗೆ ತಿಳಿಸಬೇಕೆಂದು ಹೇಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ : ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೆ ತಾವು ಸರಿಯಾದ ಉತ್ತರ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಸಿ.ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರ್ ಅನ್ನು ಅಪಾಯಿಂಟ್ ಮಾಡಿಕೊಳ್ಳುವುದನ್ನು ತಕ್ಷಣದಲ್ಲಿ ಸ್ಥಗಿತಗೊಳಿಸಿದ್ದೇವೆ ಎಂದು ಹೇಳಿದರು. ಇವತ್ತು ಮಾನ್ಯ ಸಿಂಧ್ಯರವರು ಹೇಳಿದ ರೀತಿಯಲ್ಲಿ 800 ಹುದ್ದೆಗಳು ಖಾಲಿ ಇವೆ. ನನ್ನ ಕ್ಷೇತ್ರದಲ್ಲಿ ಏಳು ಹುದ್ದೆಗಳು ಖಾಲಿ ಇದೆ. ಆಸ್ಪತ್ರೆಗೆ ಬರತಕ್ಕಂಥ ರೋಗಿಗಳಿಗೆ ಚಿಕಿತ್ಸೆಯನ್ನು ಕೊಡತಕ್ಕಂಥ ಒಂದು ಸವಲತ್ತನ್ನು ಮಾಡದೇ ಇದ್ದರೆ ಹೇಗೆ? ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ವೈದ್ಯರನ್ನು ತೆಗೆದುಕೊಳ್ಳುವುದನ್ನು ಸ್ಥಗಿತಗೊಳಿಸಿದ್ದೀರಿ ನಿಜ. ಅದು ಹೋಗಲಿ ಆದರೆ ಪಿ.ಹೆಚ್.ಸಿ. ಯಿಂದಾಗಲಿ, ಮತ್ತೊಂದು ವ್ಯವಸ್ಥೆಯಿಂದಾಗಲಿ ಡಾಕ್ಟರ್‌ನ್ನು ಕೊಡುವಂತಹ ವ್ಯವಸ್ಥೆಯನ್ನು ಯಾವಾಗ ಮಾಡುತ್ತೀರಿ? ಈ ತಕ್ಷಣದಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ? ಇನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ಎನ್ನುವುದನ್ನು ತಾವು ಈ ಸಭೆಗೆ ತಿಳಿಸಬೇಕು.

M.R. SPEAKER : It is a common affair in each and every taluk, including my taluk. ಆದಷ್ಟು ಬೇಗ ಇದರ ಬಗ್ಗೆ ಶೀಘ್ರ ಕಾರ್ಯಕ್ರಮ ಕೈಗೊಳ್ಳಿ.

ಡಾ: ಎ.ಬಿ.ಮಾಲಕರೆಡ್ಡಿ : ಇದರ ಬಗ್ಗೆ 2-3 ಬಾರಿ ಉತ್ತರ ಹೇಳಿದ್ದೇನೆ. ಮತ್ತೆ ಅದನ್ನೇ ರಿಪೀಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು : 2-3 ದಿವಸದಲ್ಲಿ ಮಾಡುತ್ತೇವೆಂದು ಹೇಳಿದ ಮೇಲೆ Further supplementary doesn't arise. Next question.

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕೊರತೆ

249 (1745) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ ಕ್ಷೇತ್ರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕೊರತೆ ತುಂಬಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ನೀರಿನ ಕೊರತೆಯನ್ನು ನಿವಾರಿಸಲು ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರದ ಒಟ್ಟು 358 ಗ್ರಾಮೀಣ ಜನವಸತಿಗಳ ಪೈಕಿ 68 ಜನವಸತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದೆ.

ಆ) ಈ ಸಮಸ್ಯೆಯನ್ನು ನಿವಾರಿಸಲು ಹಾಲಿ ಯೋಜನೆಗಳನ್ನು ಪುನಶ್ಚೇತನಗೊಳಿಸಲು / ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಅನಿವಾರ್ಯವಿದ್ದಲ್ಲಿ ಹೊಸದಾಗಿ ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದೆ.

ಶ್ರೀಮತಿ ಕೆ.ಎ.ಅನಸೂಯಮ್ಮ ನಟರಾಜನ್ : ಮಾನ್ಯ ಅಧ್ಯಕ್ಷರೆ, ಈಗಾಗಲೆ ಚಿಕ್ಕಬಳ್ಳಾಪುರದಲ್ಲಿ 'ಜಕ್ಕಲಮಡಗು' ವಿನಲ್ಲಿ ನೀರಿದೆ. ಆದರೆ ಮೋಟಾರು, ಪಂಪ್ ಇಲ್ಲದೆ ತುಂಬಾ ತೊಂದರೆಯಾಗಿದೆ. ಆ ನೀರು ಕಾವೇರಿ ನೀರಿನ ತರಹ ಇದೆ. ಆ ನೀರಿಗೆ ಎಕ್ಸ್‌ಪ್ರೆಸ್ ಲೈನ್ ಮತ್ತು ಮೋಟಾರು ಹಾಗೂ ಬೂಸ್ಟರ್ ಎಲ್ಲಾ ಅಳವಡಿಸಿಕೊಟ್ಟರೆ ಮೂರ್ನಾಲ್ಕು ತಾಲ್ಲೂಕ್‌ಗಳಿಗೆ ಒಳ್ಳೆಯ ಕುಡಿಯುವ ನೀರಿನ ಸೌಲಭ್ಯ ಸಿಗುತ್ತದೆ. ದಯಮಾಡಿ ಅದನ್ನು ನಗರಕ್ಕೆ ಮತ್ತು ಗ್ರಾಮಗಳಿಗೆ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಈ ಚಿಕ್ಕಬಳ್ಳಾಪುರ ತಾಲ್ಲೂಕಿನ ಬಗ್ಗೆ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಇದಕ್ಕೆ ಪ್ರಾರಂಭದಲ್ಲಿ ಉತ್ತರ ಹೇಳಿ, ಅನಂತರ ತಾವು ಕೇಳಿರತಕ್ಕಂಥ ಪ್ರಶ್ನೆಗೆ ಬರುತ್ತೇನೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 358 ಹ್ಯಾಬಿಟೇಷನ್ಸ್ ಇವೆ. ಅದರಲ್ಲಿ 118 ಹ್ಯಾಬಿಟೇಷನ್, ಚಿಕ್ಕಬಳ್ಳಾಪುರದಲ್ಲಿ ಇದೆ. 40 ಹ್ಯಾಬಿಟೇಷನ್ಸ್ ಗೌರಿಬಿದನೂರಿನಲ್ಲಿ ಇದೆ. ಇಲ್ಲಿ ಆಗಲೇ 32 ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ಸ್, ಮತ್ತೆ 149 ಮಿನಿವಾಟರ್ ಸಪ್ಲೈ ಸ್ಕೀಮ್ಸ್ ಪೂರ್ತಿಯಾಗಿದೆ. ಹೋದವರ್ಷ ಎಂದರೆ 1999-2000 ರಲ್ಲಿ 73 ಲಕ್ಷ ರೂಪಾಯಿಗಳನ್ನು ತಾಲ್ಲೂಕಿಗೆ ಕೊಟ್ಟಿದೆ. ಬಜೆಟ್‌ನಲ್ಲಿ 56 ಲಕ್ಷ ರೂಪಾಯಿಗಳು ಇದ್ದರೂ ಕೂಡ 73 ಲಕ್ಷ ರೂಪಾಯಿಗಳು ಈ ತಾಲ್ಲೂಕಿಗೆ ಹೋಗಿದೆ. ಇಷ್ಟು ಮಾಡಿದರೂ ಕೂಡ 68 ಹ್ಯಾಬಿಟೇಷನ್ಸ್‌ನಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಇನ್ನು 68 ಹ್ಯಾಬಿಟೇಷನ್ಸ್ ಪೈಕಿ 24 ಹ್ಯಾಬಿಟೇಷನ್ಸ್‌ನಲ್ಲಿ ಆಗಲೇ ಬೋರ್‌ವೆಲ್ಸ್ ಮಾಡಿದ್ದೇವೆ. ಇನ್ನು ಬಾಕಿ 44 ಹ್ಯಾಬಿಟೇಷನ್ಸ್‌ನಲ್ಲಿ ಅಡಿಷನಲ್ ಬೋರ್‌ವೆಲ್ಸ್ ಹಾಕುವ ವ್ಯವಸ್ಥೆ ಮಾಡಿದ್ದೇವೆ. ಮಿನಿ ವಾಟರ್ ಸಪ್ಲೈ ಸ್ಕೀಮ್, ರಿವೈವಲ್ ಸ್ಕೀಮ್ಸ್ 100 ಮಾಡಿದ್ದೇವೆ. ಕೋಲಾರ ಜಿಲ್ಲೆಗೆ ನಾಲ್ಕು ಕೋಟಿ ರೂಪಾಯಿಗಳನ್ನು ಅಡಿಷನಲ್ ಗ್ರಾಂಟ್ ಈಗಾಗಲೇ ಕೊಟ್ಟಿದೆ. ಸೆಂಟ್ರಲ್ ಸ್ಕೀಮ್ ಪ್ರಕಾರ 5 ಕೋಟಿ 73 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬಜೆಟ್ ಪ್ರಾವಿಷನ್ 4 ಕೋಟಿ 38 ಲಕ್ಷ ರೂಪಾಯಿಗಳು ಇದ್ದರೂ ಕೂಡ ಜಾಸ್ತಿ ಕೊಟ್ಟಿದ್ದೇವೆ. ಸ್ಟೇಟ್ ಸ್ಕೀಮ್‌ನಲ್ಲಿ ಬಜೆಟ್ 356 ಲಕ್ಷ ರೂಪಾಯಿಗಳು ಇದ್ದರೂ ಕೂಡ 614 ಲಕ್ಷ ರೂಪಾಯಿಗಳನ್ನು ಕೋಲಾರಕ್ಕೆ ಕೊಟ್ಟಿದ್ದೇವೆ. ಇದರಿಂದ ಇನ್ನು ಹೆಚ್ಚಿನ ಹಣ ಬೇಕಿದ್ದರೆ

ಚಿಕ್ಕಬಳ್ಳಾಪುರಕ್ಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಮಧ್ಯೆ ಈ ವಾಟರ್ ಟೇಬಲ್ ಪ್ರಾಬ್ಲಂ ಏನಿದೆ ಇದು ಮುಖ್ಯವಾದಂತಹ ಸಮಸ್ಯೆ. ಈ ತಿಂಗಳಿನಲ್ಲಿ ವಾಟರ್ ಟೇಬಲ್ ಕಡಿಮೆಯಾಗುತ್ತದೆ. ಮಳೆ ಬಂದರೆ ಮತ್ತೆ ಸರಿಹೋಗುತ್ತದೆ. ಇದು ಅಲ್ಲಿ ಇರತಕ್ಕಂಥ ಸಮಸ್ಯೆ. ಇದಕ್ಕೋಸ್ಕರ ಮೈನ್ಸ್ ಅಂಡ್ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ವಾಟರ್ ರಿಸೋಸರ್ಸ್ ಕನ್‌ಸಾಲಿಡೇಷನ್ ಪ್ರಾಜೆಕ್ಟ್ ಎಂದು ಮಾಡಿದ್ದಾರೆ. ಅದಕ್ಕೆ 471 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮತ್ತೆ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಅನ್ನು ನಾವು ಇದಕ್ಕೋಸ್ಕರ ಕೇಳಿದ್ದೇವೆ. ಆ ಪ್ರಾಜೆಕ್ಟ್ ಬಂದರೆ 14 ಜಿಲ್ಲೆಗಳಲ್ಲಿ 58 ತಾಲ್ಲೂಕುಗಳಿಗೆ ಇದು ಅನ್ವಯಿಸುತ್ತದೆ. ಕೋಲಾರ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿಗೂ ಕೂಡ ಇದು ಅನ್ವಯಿಸುತ್ತದೆ. ಇದು ಈಗಿರತಕ್ಕಂಥ ಪರಿಸ್ಥಿತಿ. ಈಗ ಹೊಸ ಅಂಶ ಏನು ಅವರು ಹೇಳಿದ್ದಾರೆ, ನದಿಯಿಂದ ಅಥವಾ ಹೊಳೆಯಿಂದ ನೀರು ತಂದರೆ ಅನುಕೂಲವಾಗುತ್ತದೆ ಎಂದು; ನಾವು ಕೂಡ ಎಲ್ಲೆಲ್ಲಿ ಅದರ ಅವಶ್ಯಕತೆ ಇದೆ, ಎಷ್ಟೆಲ್ಲಾ ಪ್ರಯತ್ನ ಮಾಡಿದರೂ ಕೂಡ ಸಾಕಷ್ಟು ನೀರು ಕೊಡುವುದಕ್ಕೆ ಆಗುವುದಿಲ್ಲ, ಅಂತಹ ಕಡೆ ಹೊಳೆಯಿಂದ ನೀರನ್ನು ಕೊಡುವಂತಹ ವಿಚಾರವನ್ನು ಸರ್ಕಾರ ಗಮನಿಸುತ್ತದೆ. ಈಗ ಸಧ್ಯಕ್ಕೆ ಅಂತಹ ಕಾರ್ಯಕ್ರಮ ನಮ್ಮ ಮುಂದೆ ಇಲ್ಲ.

ಶ್ರೀಮತಿ ಕೆ.ಎ.ಅನಸೂಯಮ್ಮ ನಟರಾಜನ್ : ತಮಗೆ ವಂದನೆಗಳು ಮತ್ತೊಂದು ವಿಚಾರ ಇದೆ. ಕೆರೆಗಳಲ್ಲಿ ಹೂಳು ಎತ್ತುವ ಬಗ್ಗೆ ಹೇಳುವುದಾದರೆ ಈಗಾಗಲೇ ಮಳೆಗಾಲ ಶುರುವಾಗಿದೆ. ಆದುದರಿಂದ ಇದಕ್ಕೆ ಸಂಬಂಧಪಟ್ಟಂತೆ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದುವರೆಗೆ ಚಿಕ್ಕಬಳ್ಳಾಪುರದ ಕೆರೆಗಳಲ್ಲಿ ಅಮಾನಿ ಕೆರೆ ಒಂದನ್ನು ಮಾತ್ರ ತೆಗೆದುಕೊಂಡಿದ್ದಾರೆ. ಅದರ ಜೊತೆಗೆ ಇನ್ನು ಕೆಲವು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ನನ್ನ ಸವಿನಯ ಪ್ರಾರ್ಥನೆ.

ಶ್ರೀ ಎಂ.ವೈ.ಘೋರ್ಪಡೆ : ಇಲ್ಲಿ ಕೆರೆ ವಿಷಯವಾಗಿ ಅದು ಬೇರೆ ಪ್ರಶ್ನೆಯಾಗಿದ್ದರೂ ಕೂಡ ನಾನು ಉತ್ತರ ಹೇಳುತ್ತೇನೆ. 100 ಎಕರೆಗಿಂತ ಕಡಿಮೆ ಇರತಕ್ಕಂಥ ಕೆರೆಗಳು ಜಿಲ್ಲಾ ಪಂಚಾಯತ್ ಅಧಿಕಾರಕ್ಕೆ ಬಂದಿದೆ. ಸಾಮಾನ್ಯವಾಗಿ ಹೂಳು ತೆಗೆಯುವುದಕ್ಕೆ ಎಂದು ಸಣ್ಣ ಸಣ್ಣ ಕೆರೆಗಳನ್ನು ತೆಗೆದುಕೊಂಡರೆ ಒಂದು ಕೆರೆಗೆ ಸರಾಸರಿ 50 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಆದಕಾರಣ 20-30 ಕಡೆಗಳಲ್ಲಿ ಅಂತಹ ಕೆರೆಗಳಿಂದ ಜನರಿಗೆ ಕುಡಿಯುವ ನೀರಿಗೆ ಅನುಕೂಲವಾಗುತ್ತಿದೆ. ಅಂತಹ ಕಡೆಗಳಲ್ಲಿ ಕೆಲಸ ಪ್ರಾರಂಭ ಮಾಡುವುದಕ್ಕೆ ಏನೂ ತೊಂದರೆಯಿಲ್ಲ. ತಾವು ಜಿಲ್ಲಾ ಪಂಚಾಯತ್ ಮೀಟಿಂಗ್ ಆದಾಗ ಇದರ ಬಗ್ಗೆ ಪ್ರಸ್ತಾಪ ಮಾಡಬಹುದು.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಒಂದು ಪ್ರಶ್ನೆ ಕೇಳಲಿಚ್ಛಿಸುತ್ತೇನೆ. ಈ ಕುಡಿಯುವ ನೀರಿನ ಅಭಾವ ಬರೀ ಕೋಲಾರ ಜಿಲ್ಲೆಗೆ ಮಾತ್ರ ಮೀಸಲಾಗಿಲ್ಲ. ರಾಜ್ಯದ ಎಲ್ಲಾ ಕಡೆಗಳಲ್ಲಿ ಕುಡಿಯುವ ನೀರಿನ ಅಭಾವ ವಿಪರೀತವಾಗಿದೆ. ಇದಕ್ಕೆ ನಾನು ಒಂದು ಸಲಹೆಯನ್ನು ಮಾನ್ಯ ಮಂತ್ರಿಯವರಿಗೆ ಕೊಡಲು ಇಚ್ಛಿಪಡುತ್ತೇನೆ. ಜಿಲ್ಲಾ ಪಂಚಾಯತ್ ವತಿಯಿಂದ ಜಿಯಾಲಜಿಸ್ಟ್‌ಗಳನ್ನು ನೇಮಕ

ಮಾಡುತ್ತಾರೆ. ಅವರು ನೂರು ಪಾಯಿಂಟುಗಳನ್ನು ಗುರುತು ಮಾಡಿದರೆ ಇದರಲ್ಲಿ ಸಕ್ಸಸ್ ಆಗುವಂಥಾದ್ದು, ಒಂದೋ ಎರಡೋ ಆಗುತ್ತದೆ. ಆ ಒಂದು ತಪ್ಪು ಕಂಡು ಹಿಡಿಯುವುದಕ್ಕೆ ಫುನಃ ಎಂಬತ್ತು ಅಡಿ ತೆಗೆದುಬಿಟ್ಟು 120-150 ಅಡಿಗಳು ತೆಗೆಯುತ್ತೇವೆಂದು ಸುಳ್ಳು ಮಾಹಿತಿಯನ್ನು ಕೊಡುತ್ತಾರೆ. ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ಕಡಿಮೆ ಮಾಡುವುದಕ್ಕೋಸ್ಕರ ಮಾನ್ಯ ಮಂತ್ರಿಗಳು ವಿಜಲೆನ್ಸ್ ಸ್ಕ್ವಾಡ್‌ಗಳನ್ನು ನೇಮಕ ಮಾಡಬೇಕಾಗುತ್ತದೆ. ಇದನ್ನು ಮಾಡುವುದಕ್ಕೆ ತಾವು ಕ್ರಮ ಕೈಗೊಂಡರೆ ಖಂಡಿತವಾಗಿ ಕುಡಿಯುವ ನೀರಿನ ಬಗ್ಗೆ ಸಂಗ್ರಹವಾಗುವಂತಹ ಹಣ ದುರುಪಯೋಗವಾಗದೇ ಒಳ್ಳೆಯ ರೀತಿಯಲ್ಲಿ ಉಪಯೋಗವಾಗುತ್ತದೆಂದು ನನ್ನ ಭಾವನೆಯಾಗಿದೆ. ಆದುದರಿಂದ ದಯಮಾಡಿ ಮಾನ್ಯ ಮಂತ್ರಿಯವರು ಇದರ ಬಗ್ಗೆ ಸಮಂಜಸವಾದಂತಹ ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದ ಹಾಗೆ ಬೇಸಿಗೆ ಕಾಲದಲ್ಲಿ ಈ ವಾಟರ್ ಟೇಬಲ್ ಕಡಿಮೆಯಾಗುತ್ತದೆ, ಇದು ಅಲ್ಲಿ ಮುಖ್ಯವಾದಂತಹ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಸರಿ ಮಾಡಬೇಕೆಂದರೆ, ಈ ವಾಟರ್ ಷೆಡ್ ಡೆವಲಪ್‌ಮೆಂಟ್‌ನಲ್ಲಿ ನಾವು ಎಲ್ಲಿ ನೀರು ನಿಲ್ಲಿಸುವುದಕ್ಕೆ ಸಾಧ್ಯವಿದೆ, ಅದು ಮಿನಿ ನಾಲವಾದರೂ ಮಾಡಬಹುದು, ಕೆರೆಗಳಲ್ಲಿ ಹೂಳು ತೆಗೆಯಬಹುದು ಅಥವಾ ಎಲ್ಲೆಲ್ಲಿ ನೀರು ಸಂಗ್ರಹ ಮಾಡುವುದಕ್ಕೆ ಸಾಧ್ಯವಿದೆ, ಅಲ್ಲಿ ಅದನ್ನು ಮಾಡಿದರೆ ಮಾತ್ರ ವಾಟರ್ ಟೇಬಲ್ ಕಡಿಮೆ ಆಗದಂತೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಕಾರ್ಯಕ್ರಮಕ್ಕೆ ಬೇರೆ ಬೇರೆ ಯೋಜನೆಯಲ್ಲಿ ಸಾಕಷ್ಟು ಹಣವಿದೆ. ಇದರಲ್ಲಿ ಆಸಕ್ತಿ ಇರುವಂತಹ ಎಲ್ಲಾ ಸದಸ್ಯರು ಆ ಹಣದಲ್ಲಿ ಸಾಕಷ್ಟು ಖರ್ಚು ಮಾಡಿ ವಾಟರ್ ಟೇಬಲ್ ಕಾಪಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ, ಇದಕ್ಕೆ ಬೇರೆ ಮಾರ್ಗವಿಲ್ಲ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ ಜಿಯಾಲಜಿಸ್ಟ್ ಅಲ್ಲಿ ಏನು ಪಾಯಿಂಟ್ ಗುರುತು ಮಾಡುತ್ತಾರೋ ಅದು ಸಮಂಜಸವಾಗಿಲ್ಲ. ಅವರು ಸರ್ಕಾರಕ್ಕೆ ಸುಳ್ಳು ಮಾಹಿತಿಯನ್ನು ಕೊಡುತ್ತಾರೆ. ಇದರಿಂದ ಹಣ ದುರುಪಯೋಗವಾಗುತ್ತಿದೆ. ಇದನ್ನು ತಪ್ಪಿಸಬೇಕೆಂದರೆ ಮತ್ತೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದರೆ ಸ್ಕ್ವಾಡ್‌ಗಳನ್ನು ನೇಮಕ ಮಾಡಿ ಆಗುವಂತಹ ಅನ್ಯಾಯವನ್ನು ತಡೆಯುವಂಥಾದ್ದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದು ನನ್ನ ಪ್ರಶೆಯಾಗಿದೆ.

MR.SPEAKER : Vigilance squad about the malpractices, ಅವರು ಬೋರ್‌ವೆಲ್‌ಗಳನ್ನು ಹಾಕಿದಾಗ 180 ಅಡಿಗೆ, 380 ಅಡಿಗೆ ಲೆಕ್ಕ ಕೊಡುತ್ತಾರೆ. ಅದಕ್ಕೆ ವಿಜಿಲೆನ್ಸ್ ಸ್ಕ್ವಾಡ್‌ಗಳನ್ನು ಏಕೆ ನೇಮಕ ಮಾಡಬಾರದೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಎಂ.ವೈ.ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ನಾವು ಆಗಲೇ ಎಲ್ಲಾ ಸಿಇಒ ಗಳಿಗೂ ಒಂದು ಆದೇಶವನ್ನು ಕೊಟ್ಟಿದ್ದೇವೆ. ಅವರು ಪ್ರತಿಯೊಂದು ವಾಟರ್ ಸೋರ್ಸನ್ನು ಇನ್‌ಸ್ಪೆಕ್ಟ್ ಮಾಡಬೇಕು, ಅದು ಬೋರ್‌ವೆಲ್ ಆಗಲಿ, ಮಿನಿ ವಾಟರ್ ಸ್ಕೀಮ್ ಆಗಲಿ, ಪಂಪ್ ವಾಟರ್ ಸ್ಕೀಮ್ ಆಗಲಿ, ಅವರು ತಕ್ಷಣ ಭೇಟಿ ಮಾಡಿ, ಅಲ್ಲಿ ಇನ್ಸ್‌ಪೆಕ್ಟ್ ಮಾಡಿ ನೀರು ಬರುತ್ತಿದೆಯೋ,

ಇಲ್ಲವೊ ಎಂಬುದನ್ನು ನೋಡಬೇಕು. ಈ ಕೆಲಸವನ್ನು ಇದೇ ತಿಂಗಳಲ್ಲಿ ಮುಗಿಸಬೇಕೆಂದು ಇದೆ. ಇದರಿಂದ ಎಲ್ಲೆಲ್ಲಿ ರಿಪೇರಿ ಮಾಡುವಂತಹ ಅವಶ್ಯಕತೆ ಇದೆ ಎಂಬುದು ಅವರ ಗಮನಕ್ಕೆ ಬಂದು ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. We have ordered all the CEOS, to complete inspection of all water sources. Within on month.

ಶ್ರೀ ವಿ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬೋರವೆಲ್‌ಗಳನ್ನು 150-180 ಅಡಿಯಷ್ಟು ತೋಡಿ 380 ಅಡಿಗೆ ಬಿಲ್ ಮಾಡುತ್ತಾರೆಂದು ಹೇಳಿದರು. ಅದಕ್ಕೆ ನಾನು ಮಾನ್ಯ ಮಂತ್ರಿಗಳನ್ನು ಕೇಳುವಂಥಾದ್ದು. ಇದು ಬರೀ ದೊಡ್ಡಬಳ್ಳಾಪುರದಲ್ಲಿ ಮಾತ್ರವಲ್ಲ, ಎಲ್ಲಾ ಕಡೆಗಳಲ್ಲೂ ಆಗಿದೆ, ಎರಡುನೂರು ಅಡಿ ಕೊರೆದು ನಾಲ್ಕು ನೂರು ಅಡಿ ಕೊರೆದವೆಂದು ಬಿಲ್ ಮಾಡುತ್ತಾರೆ, ಹ್ಯಾಂಡ್ ಪಂಪ್‌ಗಳಿಗೆ ಕೊಟ್ಟಿರುವಂತಹ ಪೈಪ್‌ಗಳನ್ನು ಕಿತ್ತು ಮಾರುತ್ತಾರೆ. ಇದರ ಬಗ್ಗೆ ನೀವು ಸ್ಟ್ರಾಡ್ ಮಾಡಿ ತನಿಖೆ ಮಾಡಿಸುವಂಥಾದ್ದಕ್ಕೆ ಮಾನ್ಯ ಮಂತ್ರಿಯವರು ಆದೇಶ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಇದರ ಬಗ್ಗೆ ನಮ್ಮ ಗಮನಕ್ಕೆ ಏನಾದರೂ ಬಂದರೆ ಖಂಡಿತವಾಗಿಯೂ ನಾವು ತನಿಖೆ ಮಾಡಿಸುತ್ತೇವೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಹಿಂದೆ ಮಾನ್ಯ ನಜೀರ್‌ಸಾಬ್‌ರವರು ಮಂತ್ರಿಗಳಾಗಿದ್ದರು, ಅವರು ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ಜನರಿಗೆ ಬಹಳ ಅನುಕೂಲ ಮಾಡಿದರು. ಈಗ ಚಿಕ್ಕಬಳ್ಳಾಪುರದಲ್ಲಿ ಸಿರೀಯನ್ ಪ್ರಾಬ್ಲಂ ಇದೆ. ಯಾವ ರೀತಿಯಲ್ಲೂ ವಾಟರ್ ಸೋರ್ಸ್ ಇಲ್ಲ, ಈ ವಿಷಯವನ್ನು ಅಲ್ಲಿನ ಅನೇಕ ವಕೀಲರು ನನ್ನ ಗಮನಕ್ಕೆ ತಂದಿದ್ದಾರೆ. ಈಗ ಈ ಪ್ರಶ್ನೆ ಎತ್ತಿರುವಂಥಾದ್ದು ಒಳ್ಳೆಯ ಪ್ರಶ್ನೆಯಾಗಿದೆ. ಚಿಕ್ಕಬಳ್ಳಾಪುರ ಡಿವಿಜನ್ ಅದರಲ್ಲೂ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಮತ್ತು ಈ ಬಾಗೇಪಲ್ಲಿ, ಈ ಪ್ರದೇಶಗಳಲ್ಲಿ ನೀರು ಇಲ್ಲವೇ ಇಲ್ಲ. ಇದಕ್ಕೆ ತಾವು ಏನು ಕಾರ್ಯಕ್ರಮವನ್ನು ಹಾಕಿದ್ದೀರಿ? ಚಿಕ್ಕಬಳ್ಳಾಪುರ ಡಿವಿಜನ್ ಎಂದರೆ ಅಸಿಸ್ಟೆಂಟ್ ಕಮೀಷನರ್ ಡಿವಿಜನ್‌ನಲ್ಲಿ ಪೂರ್ತಿ ನೀರಿಗೆ ತೊಂದರೆಯಾಗಿದೆ. ಇಲ್ಲಿ ನಾಲ್ಕೈದು ಮೈಲಿಯಿಂದ ನೀರು ತರಬೇಕು. ಅಲ್ಲಿ ವಾಟರ್ ಟ್ಯಾಂಕ್‌ಗಳು ಇಲ್ಲ, ಅಲ್ಲಿ ಯಾವ ಪರಿಸ್ಥಿತಿ ಉಂಟಾಗಿದೆ ಎಂದರೆ ತಾವು ಇದಕ್ಕೆ ಶೀಘ್ರವಾದಂತಹ ಕಾರ್ಯಕ್ರಮವನ್ನು ಜರುಗಿಸದಿದ್ದರೆ ಅಲ್ಲಿ ಮಳೆ ಬರುವುದರೊಳಗೆ ನೀರಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ವಿ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾವು ಚಿಕ್ಕಬಳ್ಳಾಪುರ, ಗೌರಿಬಿದನೂರು ಎಂ.ಎಲ್.ಎ.ಗಳು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದ್ದೇವೆ. ಈ ಬಗ್ಗೆ ಒಂದು ಎಸ್ಟಿಮೇಟ್ ಮಾಡಿ ಹುಡ್ಕೋಗೆ ಸ್ಯಾಂಕ್ಷನ್‌ಗೆ ಕಳಿಸಿಕೊಟ್ಟಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಪತ್ರವನ್ನು ಬರೆದಿದ್ದಾರೆ, ಅದು ಈಗ ತಾನೆ ಬಂದಿದೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ನಾವು ಇದರ ಬಗ್ಗೆ ಹೇಳಬೇಕೆಂದರೆ, ಒಂದು ದುರ್ದೈವದ ಸಂಗತಿ ಏನೆಂದರೆ ಈ ತಕ್ಷಣ ಶೀಪ್ರವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಬರುವುದಿಲ್ಲ. ಈಗ ಮಳೆ ಬಂದ ತಕ್ಷಣ ಈ ವಾಟರ್ ಟೇಬಲ್ ಸುಧಾರಣೆಯಾಗುತ್ತಿದೆ. ಇದರಲ್ಲಿ ಸಮಸ್ಯೆ ಇಲ್ಲವೆಂದು ನಿಮಗೆ ಅನಿಸಬಹುದು. ಆದರೆ ಲಾಂಗ್ ಟರ್ಮ್ ಸಮಸ್ಯೆ ಅಂತೂ ಇದೆ. ಈ ಲಾಂಗ್ ಟರ್ಮ್ ಸಮಸ್ಯೆ ಎಂದರೆ ಈಗ ನಾವು ಅಂಡರ್ ಗ್ರೌಂಡ್ ವಾಟರ್ ಮಾತ್ರ ಟ್ಯಾಪ್ ಮಾಡುತ್ತಿದ್ದೇವೆ. ನಾವು ಬೋರ್‌ವೆಲ್ ಮುಖಾಂತರ, ಮಿನಿ ವಾಟರ್, ಪೈಪ್ ವಾಟರ್, ಮತ್ತು ಸಾಧ್ಯವಾದರೆ ಹೊಳೆಯಿಂದ, ನದಿಯಿಂದ ನೀರು ತರುವಂಥಾದ್ದಕ್ಕೆ ಇನ್ನೂ ಆ ಸ್ಟೇಜ್‌ಗೆ ನಾವು ಹೋಗಿಲ್ಲ, ಏಕೆಂದರೆ ಈ ಒಂದು ಕಾರ್ಯಕ್ರಮಕ್ಕೆ ಬಹಳಷ್ಟು ದುಡ್ಡು ಖರ್ಚಾಗುತ್ತದೆ, ಮತ್ತೆ ಅಂಡರ್ ಗ್ರೌಂಡ್ ವಾಟರ್ ಸೋರ್ಸಸ್‌ನಿಂದ ಕುಡಿಯುವ ನೀರನ್ನು ಕೊಡುವುದಕ್ಕಾಗುವುದಿಲ್ಲ. ಅಂತಹ ಪ್ರಸಂಗ ಬಂದರೆ ಅದನ್ನು ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಈ ಪರಿಸ್ಥಿತಿ ರಾಜ್ಯದ ಹಲವಾರು ಕಡೆ ಇರುವುದಕ್ಕೆ ಸಾಧ್ಯ ಇದೆ. Time has come to tap flow water. ಇದಕ್ಕೆ ಬಹಳಷ್ಟು ಹಣ ಖರ್ಚಾಗುವುದರಿಂದ ಶೀಪ್ರವಾಗಿ ಎಂದರೆ ಇದೇ ತಿಂಗಳಲ್ಲಿ ಮಾಡುವುದಕ್ಕಾಗುವುದಿಲ್ಲ.

ವಿಶ್ವಬ್ಯಾಂಕ್ ಯೋಜನೆಯಲ್ಲಿ ಹಾಸನ ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕುಡಿಯುವ ನೀರಿನ ಯೋಜನೆಯ ಪ್ರಗತಿ.

251 (2350) ಶ್ರೀ ಶಿವರಾಮು ಬಿ. (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವಿಶ್ವಬ್ಯಾಂಕ್ ಯೋಜನೆಯಲ್ಲಿ ಹಾಸನ ಜಿಲ್ಲೆಯ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಂಡಿರುವ ಹಳ್ಳಿಗಳೆಷ್ಟು:

ಆ) ಪ್ರಗತಿ ಯಾವ ಹಂತದಲ್ಲಿದೆ;

ಇ) ಯೋಜನೆ ಪೂರ್ಣಗೊಳ್ಳಲು ಏನಾದರೂ ಕಾಲಮಿತಿ ಇದೆಯೇ? ವಿಳಂಬಕ್ಕೆ ಕಾರಣವೇನು;

ಈ) ಜನತೆಯ ವಂತಿಕೆ ಪೂರ್ಣ ಪ್ರಮಾಣದಲ್ಲಿ ಸಂದಾಯವಾಗಿದೆಯೇ;

ಉ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ 96 ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.

ಆ) 96 ಗ್ರಾಮಗಳ ಪೈಕಿ

1) 63 ಗ್ರಾಮಗಳಲ್ಲಿ ಯೋಜನೆಗಳು ಮಾರ್ಚ್ ಅಂತ್ಯಕ್ಕೆ ಪೂರ್ಣಗೊಂಡಿವೆ.

2) 33 ಗ್ರಾಮಗಳ ಯೋಜನೆಗಳು ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.